ರಾಜ್ಯದ ರಂಗಮಂದಿರಗಳು

52 - ಶ್ರೀ ಅಯನೂರು ಮಂಜುನಾಥ (ಹೊಸನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದ ಆಡಳಿತಕ್ಕೆ ಒಳಪಟ್ಟಿರುವ ರಂಗಮಂದಿರಗಳು ಯಾವುವು ?

ಆ) ಈ ರಂಗಮಂದಿರದ ಆಡಳಿತಕ್ಕೆ ಸಮಿತಿಗಳು ಇದ್ದಾವೆಯೇ ? ಇದ್ದಲ್ಲಿ, ವಿವರವಾದ ಮಾಹಿತಿ ನೀಡುವುದು ?

ಇ) ರಾಜ್ಯದ ರಂಗಮಂದಿರಗಳಿಗೆ ನಿಗದಿಯಾದ ಬಾಡಿಗೆ ಎಷ್ಟು ? ಬಾಡಿಗೆ ನಿಗಧಿಪಡಿಸುವಾಗ ಅನುಸರಿಸಲಾಗುತ್ತಿರುವ ಮಾನದಂಡ ಯಾವುದು ?

ಈ) ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ನಿಗದಿಯಾಗಿರುವ ಬಾಡಿಗೆ ಎಷ್ಟು ? ಅಲ್ಲಿ ಅನುಸರಿಸುತ್ತಿರುವ ಮಾನದಂಡ ಯಾವುದು ?

ಉ) ರಾಜ್ಯದ ಇತರೆ ರಂಗಮಂದಿರದ ಬಾಡಿಗೆಗೂ ಶಿವಮೊಗ್ಗದ ಕುವೆಂಪು ರಂಗಮಂದಿರದ ಬಾಡಿಗೆಯಲ್ಲಿ ಅಂತರವಿದೆಯೇ ? ಇದ್ದಲ್ಲಿ ಕಾರಣಗಳೇನು ?

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ನಿರ್ಮಾಣ ಕಾರ್ಯ ಕೊನೆಗೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ರಂಗಮಂದಿರಗಳು ಈ ಕೆಳಗಿನಂತಿವೆ :

1) ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
2) ಕಲಾಮಂದಿರ, ಮೈಸೂರು.
3) ಗುಬ್ಬಿ ವೀರಣ್ಣ ರಂಗಮಂದಿರ, ತುಮಕೂರು
4) ಚನ್ನಯ್ಯ ರಂಗಮಂದಿರ, ಕೋಲಾರ
5) ಕುವೆಂಪು ರಂಗಮಂದಿರ, ಶಿವಮೊಗ್ಗ
6) ಜಿಲ್ಲಾ ರಂಗಮಂದಿರ, ಚಿಕ್ಕಮಗಳೂರು
7) ಕೆಂಗಲ್ ಹನುಮಂತಯ್ಯ ರಂಗಮಂದಿರ ಬಿಜಾಪುರ.

ಆ) ಸ್ಥಳೀಯ ಅಗತ್ಯಕ್ಕನುಗುಣವಾಗಿ ಆಯಾಯ ಜಿಲ್ಲಾಧಿಕಾರಿಗಳು ರಂಗಮಂದಿರ ಆಡಳಿತ ಸಮಿತಿಯೊಂದನ್ನು ರಚಿಸಿಕೊಂಡಿದ್ದಾರೆ.

ಇ) ಆಯಾಯಾ ಜಿಲ್ಲೆಯಲ್ಲಿನ ರಂಗಮಂದಿರಗಳ ಬಾಡಿಗೆಯನ್ನು ನಿರ್ವಹಣಾ ವೆಚ್ಚ, ರಂಗಮಂದಿರದಲ್ಲಿ ಒದಗಿಸಿರುವ ಸೌಲಭ್ಯ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿಗಳು ನಿಗದಿ ಮಾಡಿದ್ದಾರೆ.

ಈ ಕೆಳಕಂಡಂತೆ ಆಯಾಯ ಜಿಲ್ಲೆಯಲ್ಲಿನ ರಂಗಮಂದಿರಗಳಿಗೆ ಬಾಡಿಗೆ ನಿಗದಿ ಪಡಿಸಲಾಗಿದೆ.

1. **ರವೀಂದ್ರ ಕಲಾಕ್ಷೇತ್ರ, ಬೆಂಗಳೂರು**

ನಾಟಕ ಪ್ರದರ್ಶನಕ್ಕೆ	-	400.00	ರೂ.ಗಳು
ಇತರೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ	-	700.00	ರೂ.ಗಳು
ಯಕ್ಷಗಾನಕ್ಕೆ	-	2,000.00	ರೂ.ಗಳು

2. **ಕಲಾಮಂದಿರ, ಮೈಸೂರು**

ಪ್ರತಿ ಅರ್ಧ ದಿನ ಪ್ರದರ್ಶನಕ್ಕೆ	-	450.00	ರೂ.ಗಳು
ಪೂರ್ತಿ ದಿನಕ್ಕೆ	-	950.00	ರೂ.ಗಳು
ಕನ್ನಡ ಕಾರ್ಯಕ್ರಮಕ್ಕೆ	-	300.00	ರೂ.ಗಳು (ಅರ್ಧದಿನಕ್ಕೆ)
ಕನ್ನಡ ಕಾರ್ಯಕ್ರಮಕ್ಕೆ	-	600.00	ರೂ.ಗಳು (ಪೂರ್ತಿ ದಿನಕ್ಕೆ)

3. **ರಂಗಮಂದಿರ, ಚಿಕ್ಕಮಗಳೂರು**

ಟಿಕೆಟ್ ಮಾರಾಟ ಇರುವ ಕಾರ್ಯಕ್ರಮಕ್ಕೆ	-	2,000.00	ರೂ.ಗಳು
ಟಿಕೆಟ್ ಇಲ್ಲದ ಕಾರ್ಯಕ್ರಮಕ್ಕೆ	-	500.00	ರೂ.ಗಳು

4. **ಗುಬ್ಬಿ ವೀರಣ್ಣ ರಂಗಮಂದಿರ, ತುಮಕೂರು**

ಅರ್ಧ ದಿನಕ್ಕೆ	-	750.00	ರೂ.
ಪೂರ್ತಿ ದಿನಕ್ಕೆ	-	1,500.00	ರೂ.
ಟಿಕೆಟ್ ಇರುವ ಕಾರ್ಯಕ್ರಮಕ್ಕೆ	-	1,500.00	ರೂ (ಅರ್ಧ ದಿನ)
ನಾಟಕ ಪ್ರದರ್ಶನಕ್ಕೆ	-	750.00	ರೂ.
ಇತರೆ ಕಾರ್ಯಕ್ರಮಕ್ಕೆ	-	1,000.00	ರೂ.

5. **ಕುವೆಂಪು ರಂಗಮಂದಿರ, ಶಿವಮೊಗ್ಗ**

ಟಿಕೆಟ್ ಮಾರಾಟ ಪ್ರದರ್ಶನಕ್ಕೆ	-	2,500.00	ರೂ.
ಟಿಕೆಟ್ ಇಲ್ಲದ ಪ್ರದರ್ಶನಕ್ಕೆ	-	1,500.00	ರೂ.

6. ಚೆನ್ನಯ್ಯ ಕಲಾಮಂದಿರ ಕೋಲಾರ

ಟಿಕೆಟ್ ಮಾರಾಟ ಪ್ರದರ್ಶನಕ್ಕೆ - 2,000.00 ರೂ.

ಟಿಕೆಟ್ ಇಲ್ಲದ ಪ್ರದರ್ಶನಕ್ಕೆ - 1,000.00 ರೂ.

ಈ) ಟಿಕೆಟ್ ಇಲ್ಲದೆ ವಿಧಿಸುವ ಕಾರ್ಯಕ್ರಮಕ್ಕೆ ದಿನ ಒಂದಕ್ಕೆ 1,500.00 ರೂ.

ಟಿಕೆಟ್ ಮಾರಾಟ ಪ್ರದರ್ಶನಕ್ಕೆ ದಿನ ಒಂದಕ್ಕೆ 2,500.00 ರೂ. ಬಾಡಿಗೆ ನಿಗದಿಪಡಿಸಲಾಗಿದೆ. ಬಾಡಿಗೆ ಮೊತ್ತವನ್ನು ರಂಗಮಂದಿರದ ನಿರ್ವಹಣಾ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿ ನಿಗದಿಮಾಡಿರುವ ದರವನ್ನು ಗೊತ್ತು ಪಡಿಸಲಾಗಿದೆ.

ಉ) ಹೌದು. ಅಂತರವಿದೆ. ಆಯಾಯಾ ಜಿಲ್ಲೆಗಳಲ್ಲಿರುವ ರಂಗಮಂದಿರಕ್ಕೆ ಕರೂಪದ ಬಾಡಿಗೆ ವಿಧಿಸುವುದು ಕಷ್ಟ. ಶಿವಮೊಗ್ಗ ಜಿಲ್ಲಾ ರಂಗಮಂದಿರದಲ್ಲಿ ಒಂದು ಪೂರ್ಣದಿನಕ್ಕೆ ಬಾಡಿಗೆ ನಿಗದಿಪಡಿಸಲಾಗಿದೆ.

ಹಾಸನದ ಕೈಗಾರಿಕಾ ವಲಯದ ಬೆಳವಣಿಗೆ ಕೇಂದ್ರದ ಹಣ

53 - ಶ್ರೀ ಬಿ. ಶಿವರಾಂ (ಗಂಡಸಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಕೈಗಾರಿಕಾ ಬೆಳವಣಿಗೆ ಕೇಂದ್ರಕ್ಕೆ ಗುರುತುಪಡಿಸಲಾದ ಒಟ್ಟು ವಿಸ್ತೀರ್ಣ ಎಷ್ಟು, ಖಾಸಗಿ ಮತ್ತು ಸರ್ಕಾರಿ ಭೂಮಿಯ ವಿಸ್ತೀರ್ಣವೆಷ್ಟು ಮತ್ತು ಭೂಸ್ವಾಧೀನ ವ್ಯವಸ್ಥೆ ಯಾವ ಯಾವ ಹಂತದಲ್ಲಿದೆ?

ಆ) ಇಲ್ಲಿಯವರೆಗೆ ಕೈಗಾರಿಕಾ ಬೆಳವಣಿಗೆ ಕೇಂದ್ರಕ್ಕೆ ಖರ್ಚು ಮಾಡಿರುವ ಹಣವೆಷ್ಟು, ಯಾವ ಯಾವ ವ್ಯವಸ್ಥೆಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದೆ (ವರ್ಷವಾರು ವಿವರ ಒದಗಿಸುವುದು)

ಇ) ಪೂರ್ಣಪ್ರಮಾಣದ ಕೈಗಾರಿಕಾ ಬೆಳವಣಿಗೆ ಕೇಂದ್ರದ ಪ್ರಗತಿಯನ್ನು ಯಾವಾಗ ಪೂರ್ಣಗೊಳಿಸಲು ಸಾಧ್ಯ. ತಗಲುವ ಅಂದಾಜು ವೆಚ್ಚ ಮತ್ತು ಆರ್ಥಿಕ ವ್ಯವಸ್ಥೆಯ ರೀತಿಯನ್ನು ತಿಳಿಸುವುದು.

ಶ್ರೀ ಆರ್.ಡಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಗುರುತುಪಡಿಸಲಾದ ಒಟ್ಟು ಭೂಮಿ 1764-12 ಎಕರೆ. ಖಾಸಗಿ ಜಮೀನು ೧೫೫೩ ಎಕರೆ 29 ಗುಂಟೆ ಸರ್ಕಾರಿ ಜಮೀನು 223 ಎಕರೆ 23 ಗುಂಟೆ. ಈವರೆಗೆ 935 ಎಕರೆ 20 ಗುಂಟೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.

ಆ) ಹಾಸನ ಬೆಳವಣಿಗೆ ಕೇಂದ್ರಕ್ಕಾಗಿ 31ನೇ ಜುಲೈ 95ರವರೆಗೆ ರೂ. 571.90 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಖರ್ಚಿನ ವಿವರಗಳು ಈ ಕೆಳಕಂಡಂತಿವೆ: